ದಿನಾಂಕಃ **09.11.2018** ರಂದು ಪಿಡಬ್ಲ್ಯೂ - ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ **2** ನೇ ಎದುರುದಾರರ ಪರ ವಕೀಲರಿಂದಃ

ದ್ವಿಚಕ್ರ ವಾಹನ ಚಲಾಯಿಸಲು ನನಗೆ ಚಾಲನಾ ಪರವಾನಿಗೆ ಇದೆ. ನನಗೆ ಇನ್ನೊಂದು ವಾಹನಬಂದು ನನ್ನ ಬಲ ಬದಿಯಿಂದ ಡಿಕ್ಕಿ ಹೊಡೆಯಿತು. ಆ ವಾಹನವನ್ನು ನಾನು ಡಿಕ್ಕಿಯಾಗುವ ಮೊದಲು ಗಮನಿಸಲಿಲ್ಲ. ನಾನು ಡಿವೈಡರ್ನಿಂದ ಅಂದಾಜು **20** ಅಡಿ ದೂರದಲ್ಲಿ ನಾನು ದ್ವಿಚಕ್ರ ವಾಹನವನ್ನು ಚಲಾಯಿಸುತ್ತಿದೆ ಡಿವೈಡರ್ ನನ್ನ ಬಲ ಬದಿಗೆ ಇತ್ತು. ನಾನು ಹೇಳಿದ ರೀತಿಯಲ್ಲಿ ಅಪಘಾತ ಸಂಭವಿಸಲಿಲ್ಲ ಎಂದರೆ ಸರಿಯಲ್ಲ. **2** ನೇ ಎದುರುದಾರರಾರ ವಿಮೆಗೆ ಒಳಪಟ್ಟ ವಾಹನದ ಅಜಾಗರೂಕತೆ ಇಲ್ಲ ಎಂದರೆ ಸರಿಯಲ್ಲ. ಅಪಘಾತವು ಸಂಪೂರ್ಣ ನನ್ನ ನಿರ್ಲಕ್ಷತನದಿಂದ ಸಂಭವಿಸಿದೆ ಎಂದರೆ ಸರಿಯಲ್ಲ. ಕೆ.ಎಮ್.ಸಿ. ಆಸ್ಪತ್ರೆಯಲ್ಲಿ ನನ್ನ ಚಿಕಿತ್ಸೆ ಇನ್ನೂ ಮುಗಿದಿಲ್ಲ. ನನ್ನ ಕೆ.ಎಮ್.ಸಿ. ಆಸ್ಪತ್ರೆಯಲ್ಲಿ ಇನ್ಸೂರೆನ್ಸ್ ಸ್ಕೀಮ್ ಸಿಕ್ಕಿದೆ ಎಂದರೆ ಸರಿಯಲ್ಲ. ಮಣಿಪಾಲ ಆರೋಗ್ಯ ಸುರಕ್ಷಾ ಕಾರ್ಡ್ ಯೋಜನೆಯಲ್ಲಿ ಹಣ ಸಿಕ್ಕಿಲ್ಲ. ನನಗೆ ನಿಪಿ**-15** ರ ಪ್ರಕಾರ ಮಣಿಪಾಲ ಆರೋಗ್ಯ ಸುರಕ್ಷಾ ಕಾರ್ಡ್ , ಶಂಕರ ಟ್ರಸ್ಟ್ , ಡಾ. ವೀರೇಂದ್ರ ಹೆಗ್ಡೆ ಫಂಡ್ ನಿಂದ ಹಣ ಸಿಕ್ಕಿದೆ ಎಂದರೆ ಸರಿಯಲ್ಲ. ನಿಪಿ**-15** ರಿಂದ ನಿಪಿ**-23** ರ ತನಕ ಕಾಣಿಸಿದ ಬಿಲ್ಲುಗಳಲ್ಲಿ ಮೊತ್ತ ಸಿಕ್ಕಿದೆ ಎಂದರೆ ಸರಿಯಲ್ಲ. ನಾನು ಪರಿಚಾರಕರಿಗೆ ನೀಡಿದ ಹಣದ ಬಗ್ಗೆ ದಾಖಲೆಗಳು ನನ್ನಲ್ಲಿ ಇವೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ತಿಂಗಳಿಗೆ ನನಗೆ **25** ಸಾವಿರ ಸಂಪಾದನೆ ಸಿಗುತ್ತದೆ ಎನ್ನುವ ದಾಖಲೆ ಇದೆ. ಅದನ್ನು ಹಾಜರುಪಡಿಸಬಲ್ಲೆ.

ಅಪಘಾತದಿಂದ ನನಗೆ ಯಾವುದೇ ಶಾಶ್ವತ ಅಂಗನ್ಯೂನತೆ ಆಗಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಆದಾಯ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾಹನ ಬಾಡಿಗೆಗಾಗಲೀ, ಪೌಷ್ಟಿಕ ಆಹಾರಕ್ಕಾಗಲೀ, ಪರಿಚಾರಕರ

ಭತ್ಯೆಗಾಗಲೀ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ನಿರ್ಲಕ್ಷ್ಯ ತನದಿಂದ ಅಪಘಾತ ಸಂಭವಿಸಿದ್ದರಿಂದ 2 ನೇ ಎದುರುದಾರರು ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಎಂಎಸಿಟಿ.,

ಕಾರ್ಕಳ.